ರೂಪಾಯಿ ಇಟ್ಟು ಮುಂದಕ್ಕೆ ಹೋಗುತ್ತಾನೆ. ಈ ಎಲ್ಲ ಹೋಟೆಲ್‌ಗಳು ಹೆಸರಿಗೆ ಹೋಟೆಲ್‌ಗಳು. ಯಾವುದೂ ದೊಡ್ಡ ಹೋಟೆಲ್‌ಗಳಲ್ಲ. ಇವೆಲ್ಲ ತಟ್ಟಿಭವನಗಳು. ಅರ್ಥಾತ್, ರಸ್ತೆ ಬದಿಯಲ್ಲಿ ತಟ್ಟಿಯಲ್ಲಿ ಕಟ್ಟಿದ ಸಣ್ಣ ಗೂಡುಗಳು. ನೆಲ್ಯಾಡಿಯಲ್ಲಿ ದೊಡ್ಡ ಹೋಟೆಲ್‌ಗಳು, ಭವನಗಳಿಗೆ ಕೊರತೆ ಇಲ್ಲ. ಆದರೆ ಈ ಯಾವ ದೊಡ್ಡ ಹೋಟೆಲ್‌ಗಳ ಮುಂದೆಯೂ ತಿಂಡಿಗಾಗಿ ನಿಲ್ಲುವುದಿಲ್ಲ. ಉಳಿದ ಕಡೆ ಒಂದು ರೂಪಾಯಿ ಕೊಡುವವರೆಗೆ ನಿಂತರೂ ದೊಡ್ಡ ಅಂಗಡಿ, ದೊಡ್ಡ ಹೋಟೆಲ್‌ಗಳ ಮುಂದೆ ಒಂದೇ ನಿಮಿಷ ನಿಂತು ಅವರು ಕೊಡದಿದ್ದರೆ ಎದ್ದು ಹೋಗುತ್ತಾನೆ. ಆತನಿಗೆ ಶ್ರೀಮಂತರ ಸಹವಾಸ ಬೇಡ ಎಂದನ್ನಿಸಿರಬೇಕು.

ಬಲ್ಯ ಕ್ರಾಸ್, ಇಚ್ಲಂಪಾಡಿ ಕ್ರಾಸ್, ಪೆರಿಯಶಾಂತಿ, ನೇಲಡ್ಕ, ಉದನೆ ಮಾರ್ಗವಾಗಿ ಗುಂಡ್ಯ ತಲುಪುತ್ತಾನೆ. ಗುಂಡ್ಯ ಹೊಳೆಯಲ್ಲಿ ಒಂದು ಮುಳುಗು ಹಾಕಿ ಎರಡೇ ನಿಮಿಷದಲ್ಲಿ ಸ್ನಾನ ಮುಗಿಸುತ್ತಾನೆ. ಮತ್ತೆ ಸಂಜಯ್ ನಾಯರ್‌ರ ತಟ್ಟಿ ಹೋಟೆಲ್ ಮುಂದೆ ನಿಂತು ಒಂದು ಪರೋಟ ತಿಂದು ಬಸ್ ನಿಲ್ದಾಣಕ್ಕೆ ಹೋಗಿ ಕುಳಿತುಕೊಳ್ಳುತ್ತಾನೆ. ರಾತ್ರಿ ಬಸ್ ನಿಲ್ದಾಣದಲ್ಲೋ ಶಾಲೆಯ ಜಗಲಿಯಲ್ಲೋ ತನ್ನ ಬಟ್ಟೆಯ ಗಂಟನ್ನು ತಲೆಯಡಿ ದಿಂಬಿನಂತೆ ಇಟ್ಟುಕೊಂಡು, ಪಕ್ಕದಲ್ಲಿ ಕೋಲು ಇಟ್ಟು ಮಲಗುತ್ತಾನೆ. ಮರುದಿನ ಬೆಳಗ್ಗೆ ಬೇಗನೇ ಎದ್ದು ಯಾವುದೋ ಮರದ ಗೆಲ್ಲನ್ನು ಮುರಿದು ಅದನ್ನೆ ಬ್ರಷ್‌ನಂತೆ ಬಳಸಿ ಹಲ್ಲು ತಿಕ್ಕಿ ಹೊಳೆಯಲ್ಲಿ ಮುಖತೊಳೆದು ಸೂರ್ಯನ ಕಿರಣ ಬೀಳುವಲ್ಲಿ ಬಂದು ಕುಳಿತುಕೊಳ್ಳುತ್ತಾನೆ. ತರಕನ್ ಚೇಟ 'ವಾಡ್‌ಮಿಡ್ಲೆ' ಎಂದು 'ವಾಟ್' ಅನ್ನು 'ವಾಡ್' ಎಂದುಚ್ಚರಿಸಿ ಕರೆಯುವವರೆಗೆ ಏಳುವುದಿಲ್ಲ. ಚೇಟ ಕರೆದಾಗ ಎದ್ದು ಬಂದು ಕೊಟ್ಟಿದ್ದನ್ನು ತಿಂದು ಒಂದು ರೂಪಾಯಿ ಇಟ್ಟು ಬರುತ್ತಾನೆ.

ಒಂದು ರೂಪಾಯಿ ಬೇಡ ಎಂದು ಒಮ್ಮೆಯೂ ಹೇಳದ ವ್ಯಕ್ತಿ ಅಂದ್ರೆ ಈ ತರಕನ್ ಮಾತ್ರ. ಅದಕ್ಕೆ ಕಾರಣ ಅಂದ್ರೆ ಅದು ಬೆಳಗ್ಗಿನ ಬೋನಿ. ಬೋನಿ ಧರ್ಮಕ್ಕೆ ಆದರೆ ಅವತ್ತು ಫೂರ್ತಿ ಲಾಸ್ ಎಂಬುದು ನಂಬಿಕೆ. ಇತ್ತೀಚೆಗೆ ಅದಕ್ಕೆ ಸೇರಿಕೊಂಡ ಇನ್ನೊಂದು ನಂಬಿಕೆ ಎಂದರೆ ಹಾಟ್‌ಮಿಟ್ಲೆ ಅಲಿಯಾಸ್ ವಾಟ್‌ಮಿಟ್ಲೆ ಬೋನಿ ಮಾಡಿದರೆ ಅವತ್ತು ಒಳ್ಳೆಯ ವ್ಯಾಪಾರ ಎಂಬುದು. ಹಾಗಾಗಿ ತರಕನ್ ಚೇಟನ ಹೋಟೆಲ್‌ನಲ್ಲಿ ವಾರಕೊಮ್ಮೆ ವ್ಯಾಪಾರ ಆರಂಭಗೊಳ್ಳುವುದು ವಾಟ್‌ಮಿಟ್ಲೆಯಿಂದಲೇ.

ಸಂಜಯ್ ನಾಯರ್‌ಗೂ ತನ್ನ ಹೋಟೆಲ್‌ನ ಬೋನಿ 'ವಾಟ್‌ಮಿಟ್ಲೆ'ಯಿಂದಲೇ ಆರಂಭಗೊಳ್ಳಬೇಕು ಎಂಬ ಆಸೆ ಇದೆ. ಆದರೆ ಅದಕ್ಕೆ ವಾಟ್‌ಮಿಟ್ಲೆ ಒಮ್ಮೆಯೂ ಸ್ಪಂದಿಸಿಲ್ಲ. ಅದಕ್ಕೆ ಕಾರಣ 'ವಾಟ್‌ಮಿಟ್ಲೆ' ಬರುವ ದಾರಿಯ ಕೊನೆಯಲ್ಲಿ ನಾಯರ್ ಹೋಟೆಲ್ ಇದೆ. ತರಕನ್ ಹೋಟೆಲ್ ಅದರ ಎದುರುಭಾಗದಲ್ಲಿ ರಸ್ತೆಯ ಇನ್ನೊಂದು ಬದಿಯಲ್ಲಿದೆ. ಅದು ಅವನು ಹಿಂತಿರುಗಲು ಆರಂಭಿಸುವ ಜಾಗ. ನಿಯಮವನ್ನು ಯಾವುದೇ ಕಾರಣಕ್ಕೆ 'ವಾಟ್‌ಮಿಟ್ಲೆ' ಮೀರದ ಕಾರಣ ನಾಯರ್ ಹೋಟೆಲ್ ಕೊನೆಯದಾಗಿರುತ್ತದೆ. ತರಕನ್ ಆರಂಭದಲ್ಲಿರುತ್ತದೆ. ಸಂಜಯ ನಾಯರ್ ಒಂದೆರಡು ಬಾರಿ ರಾತ್ರಿ ಪರೋಟ ಕೊಡದೆ 'ಬೆಳಗ್ಗೆ ಬರುವುದಾದರೆ ಮಾತ್ರ ಕೊಡುತ್ತೇನೆ' ಎಂದು ಸತಾಯಿಸಿದ್ದರು. ಇದಕ್ಕೆ ವಾಟ್‌ಮಿಟ್ಲೆ ಬಗ್ಗಿರಲಿಲ್ಲ. ಒಂದು ಬಾರಿಯಂತೂ ಪರೋಟ ನೀಡಿರಲೇ ಇಲ್ಲ. 'ಕಾಸ್ಟ್ ಮಿಟ್ಲೆ ವೈಟ್ ಮಿಟ್ಲೆ ಕಾಸ್ಟ್ ಕಾಸ್ಟ್ ಕಾಸ್ಟ್' ಎಂದು ಬೊಬ್ಬೆ ಹೊಡೆದು ರಾತ್ರಿ ಉಪವಾಸ ಮಲಗಿದನೇ ಹೊರತು ವಾಟ್‌ಮಿಟ್ಲೆ ನಿಯಮ ಮೀರಲಿಲ್ಲ. ಈ ವಿಚಾರ ತಿಳಿದ ಬಳಿಕ ಸುತ್ತಮುತ್ತಲಲ್ಲಿ ವಾಟ್‌ಮಿಟ್ಲೆ ಬಗ್ಗೆ ಒಂದು ವಿಚಿತ್ರ ಗೌರವ ಬೆಳೆದಿತ್ತು. ಆ ಘಟನೆಯ ನಂತರ ಸಂಜಯ ನಾಯರ್ ಎಂದಿಗೂ ವಾಟ್‌ಮಿಟ್ಲೆಗೆ